ಸಹಕಾರಿ ಸಂಘಗಳಲ್ಲಿ ರೋಸ್ಟರ್ ಪದ್ಧತಿ ಜಾರಿ ಕುರಿತು

199 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಹಕಾರ ಸಂಘಗಳಲ್ಲಿ ರೋಸ್ಟರ್ ಪದ್ಧತಿ ಜಾರಿಯಲ್ಲಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಷ್ಟು ಸಹಕಾರಿ ಸಂಘಗಳು ಈ ನಿಯಮಗಳನ್ನು ಜಾರಿಗೊಳಿಸುತ್ತಿವೆ?

ಇ) ರೋಸ್ಟರ್ ಪದ್ಧತಿ ಅನುಸರಿಸದೆ ನೇಮಕಾತಿ ಮಾಡಿದ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು? ಮತ್ತು ಸರ್ಕಾರ ಈ ಸಂಘಗಳ ಮೇಲೆ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಸ್.ಎಸ್. ಪಾಟೀಲ್(ಸಹಕಾರ ಸಚಿವರು) :

ಅ) ಹೌದು ಜಾರಿಯಲ್ಲಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 891 ಕಾರ್ಯನಿರತ ಸಹಕಾರ ಸಂಘಗಳಿಗೆ ನೇಮಕಾತಿ ಹಾಗೂ ಪದೋನ್ನತ ಮಾಡುವಾಗ ರೋಸ್ಟರ್ ನಿಯಮವನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ ನಿರ್ದೇಶನಗಳನ್ನು ಎಲ್ಲಾ ಸಂಘಗಳಿಗೆ ನೀಡಲಾಗಿದೆ.

ಇ) ಇಂತಹ ಒಂದು ಪ್ರಕರಣ ದಕ್ಷಿಣ ಕನ್ನಡ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕಿನ ಸಿಬ್ಬಂದಿ ಪದೋನ್ನತ ವಿಚಾರದಲ್ಲಿ ಸರ್ಕಾರದ ಗಮನಕ್ಕೆ ಬಂದಿತ್ತು. ಆದರೆ ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಿಂದ ಈ ಬಗ್ಗೆ ತಡೆಯಾಜ್ಞೆ ಇರುವುದರಿಂದ ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ.

ದನಕರುಗಳಿಗೆ ಮೇವು ಪೂರೈಸುವ ಬಗ್ಗೆ

133 - ಶ್ರೀ ವಿ.ಎಸ್. ಕೌಜಲಗಿ (ರಾಣೆಬೆನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಳೆ ಇಲ್ಲದೆ ರೈತರು ಕಂಗಾಲಾಗಿರುವ ಹಾಗೂ ಮೇವು ಸಹ ದನಕರುಗಳಿಗಿಲ್ಲದೆ ತೊಂದರೆ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಾಣೇಬೆನ್ನೂರು ತಾಲ್ಲೂಕಿನಲ್ಲಿ ಅತೀ ಅಭಾವವಿದ್ದು ದನಕರುಗಳಿಗೆ ಮೇವು ಇಲ್ಲದೆ ರೈತರು ತೊಂದರೆಗೆ ಒಳಗಾಗಿರುವುದರಿಂದ ಮೇವು ದನಕರುಗಳಿಗೆ ಪೂರೈಕೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ, ಕೈಕೊಳ್ಳದಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ರಾಜ್ಯದ ಕೆಲವು ತಾಲ್ಲೂಕುಗಳಲ್ಲಿ ಕಡಿಮೆ ಮಳೆಯಿಂದಾಗಿ ಕುಡಿಯುವ ನೀರಿನ ತೊಂದರೆ ಉಂಟಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಮೇವಿನ ಅಭಾವ ಇರುವುದನ್ನು ಹೊರತುಪಡಿಸಿ, ರಾಜ್ಯದ ಬೇರೆ ಜಿಲ್ಲೆಗಳಿಂದ ಮೇವಿನ ಅಭಾವದ ಬಗ್ಗೆ ವರದಿ ಬಂದಿರುವುದಿಲ್ಲ.

ಆ) ರಾಣೇಬೆನ್ನೂರು ತಾಲ್ಲೂಕಿನಲ್ಲಿ ಸದ್ಯಕ್ಕೆ ಮೇವಿನ ಸಮಸ್ಯೆ ಇರುವುದಿಲ್ಲ.ಆದಾಗ್ಯೂ ಮುಂಜಾಗ್ರತೆ ಕ್ರಮವಾಗಿ ಸರ್ಕಾರವು ರೂ. 6.00 ಲಕ್ಷಗಳನ್ನು ಈಗಾಗಲೇ ಧಾರವಾಡ ಜಿಲ್ಲೆಗೆ ಒದಗಿಸಿದ್ದು, ಮೇವಿನ ಅಭಾವ ಮುಂದೆ ಕಂಡುಬಂದಲ್ಲಿ ಮೇವು ಸರಬರಾಜಿಗೆ ಕ್ರಮ ಕೈಗೊಳ್ಳಲಾಗುವುದು.

ರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳ ವಿವರ

298 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) : ಮಾನ್ಯ ಸಾರಿಗೆ ಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು (ವಿಭಾಗವಾರು ಲಕ್ಸುರಿ ಸೆಮಿ ಲಕ್ಸುರಿ ಬಸ್ಸುಗಳ ವಿವರಗಳನ್ನು ಒದಗಿಸುವುದು)?

ಆ) ಸಂಚಾರಕ್ಕೆ ಯೋಗ್ಯವಲ್ಲದೆ ನಿಂತಿರುವ ವಾಹನಗಳ ಸಂಖ್ಯೆ ಎಷ್ಟು?

ಇ) ಇಂತಹ ವಾಹನಗಳು ಎಷ್ಟು ವರ್ಷಗಳಿಂದ ಚಲಿಸದೆ ನಿಂತಿವೆ? ಈ ವಾಹನಗಳನ್ನು ಹರಾಜು ಮಾಡುವ ಬಗ್ಗೆ ಸಂಸ್ಥೆ ಯಾವ ಕ್ರಮ ಕೈಗೊಂಡಿದೆ?

ಈ) ಇಂತಹ ವಾಹನಗಳ ಬದಲಿಗೆ ಬೇರೆ ವಾಹನಗಳನ್ನು ಕೊಂಡುಕೊಳ್ಳಲಾಗಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ದಿನಾಂಕ 21-1-96ಕ್ಕೆ ಒಟ್ಟಾರೆ 0132 ವಾಹನಗಳ ಬಲ ಹೊಂದಿದೆ. ಇದರ ವಿವರಣೆಯನ್ನು ಅನುಬಂಧ 'ಅ'ನಲ್ಲಿ ಗತ್ತಿಸಲಾಗಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಒಟ್ಟಾರೆ 85 ವಾಹನಗಳು ನಿಂತಿವೆ.

ಇ) ಅಪಘಾತ ದುರಸ್ತಿಗೆ ಅರ್ಹತಾ ನೋಂದಣಿಗಾಗಿ ಇಂಜಿನ್, ಗೇರ್ ಬಾಕ್ಸ್, ಬ್ರೇಕ್ ಮುಂತಾದ ತಾಂತ್ರಿಕ ದುರಸ್ತಿಗಾಗಿ ನಿಲ್ಲುತ್ತದೆ. ಅಲ್ಪ ಸಮಯದಲ್ಲಿ ವಿಳಂಬ ಮಾಡದೇ ವಾಹನಗಳ ದುರಸ್ತಿಯನ್ನು ಮಾಡಿ ಮಾರ್ಗದ ಮೇಲೆ ತರಲಾಗುವುದು.

ಈ) ನಿಂತ ವಾಹನಗಳನ್ನು ದುರಸ್ತಿ ಮಾಡಿ ಮಾರ್ಗದ ಮೇಲೆ ತರುತ್ತಿರುವುದರಿಂದ ವಾಹನಗಳ ಬದಲಿಗೆ ಬೇರೆ ವಾಹನಗಳನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಲ್ಲದೇ ವಿಭಾಗದ ವಾಹನಗಳ ಕೊರತೆಯನ್ನು ನೀಗಿಸುವ ಸಲುವಾಗಿ ಶೇ. 8 ಷ್ಟು ವಾಹನಗಳನ್ನು ಹೆಚ್ಚುವರಿ ವಾಹನ ಬಲವಾಗಿ ವ್ಯವಸ್ಥೆಗೊಳಿಸಿದೆ.

ಅನುಬಂಧ-ಅ

ವಿಭಾಗವಾರು ವಾಹನಗಳ ವಿವರ

ಮ ಂಖ್ಯೆ	ವಿಭಾಗಗಳು		ಸುವಿ ಹಾರಿ	ಆರ್ ಸುವಿ ಹಾರಿ	ಗ್ರಾಮಾಂ ತರ	ನಗರ	ಒಟ್ಟು
)	ಬೆಂಗಳೂರು	ಸೆಂಟ್ರಲ್	102	72	380		554
)	ಬೆಂಗಳೂರು	ರೂರಲ್	-	-	332		332
)	ಕೋಲಾರ		-	4	527	7	538
)	ಮೈಸೂರು		16	19	462	245	742
)	ಹಾಸನ		3	26	491	30	550

6)	ಮಂಗಳೂರು	42	85	318	17	462
7)	ಹುಬ್ಬಳ್ಳಿ	14	9	377	247	647
8)	ಗದಗ್	4	2	321	42	369
9)	ದಾವಣಗೆರೆ	6	5	316	-	327
10)	ಎನ್.ಕೆ. (ಸಿರಸಿ)	12	28	375	36	451
11)	ಬೆಳಗಾಂ	14	5	663	131	813
12)	ಬಿಜಾಪುರ	7	-	456	26	489
13)	ಬಾಗಲಕೋಟೆ	2	-	360	12	374
14)	ಗುಲ್ಬರ್ಗಾ	13	3	361	53	430
15)	ಬೀದರ್	2	-	311	-	313
16)	ರಾಯಚೂರು	10	4	400	29	443
17)	ಬಳ್ಳಾರಿ	4	4	406	-	414
18)	ಬಿ.ಟಿ.ಎಸ್. ಸೌತ್	-	-	-	1003	1003
19)	ಬಿ.ಟಿ.ಎಸ್. ನಾರ್ತ್	-	-	-	881	881
	ಒಟ್ಟು	251	266	6856	2759	10,132

ಸೂಚನೆ : ನಗರ ವಾಹನಗಳಲ್ಲಿ ಪುಷ್ಪಕ್ ವಾಹನಗಳು ಸೇರಿವೆ.

ಆರಾಧನಾ ಯೋಜನೆಯಡಿಯಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು

273 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಆಯಾ ಕ್ಷೇತ್ರದ ಶಾಸಕರುಗಳನ್ನು ಈ ಯೋಜನೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರೂ ಇದುವರೆವಿಗೂ ಈ ಸಮಿತಿಯು ರಚನೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಿತಿಯು ಪ್ರಯೋಜನವಾಗುವಂತೆ ಮಾಡಲು ಇದರ ಅನುಷ್ಠಾನವನ್ನು ಯಾವಾಗ ಮಾಡಲಾಗುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬಹುತೇಕ ವಿಧಾನ ಸಭಾ ಕ್ಷೇತ್ರಗಳಲ್ಲಿ ಸಮಿತಿಗಳನ್ನು ಈಗಾಗಲೇ ರಚಿಸಿ ಆದೇಶಗಳನ್ನು ಹೊರಡಿಸಲಾಗಿದೆ. ಉಳಿದ ಕ್ಷೇತ್ರಗಳ ಸಮಿತಿಗಳನ್ನು ಸಹ ರಚಿಸಲಾಗುತ್ತಿದೆ.

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಸೂಕ್ತ ಮಾರ್ಗಸೂಚಿಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆ

453 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?